# ಮಕ್ಕಳ ನಾಟಕ: ಸ್ವಾಮಿ ವಿವೇಕಾನಂದ

**ರಚನೆ:** ಹೆಚ್.ವಿ. ಸರೋಜ

(ಹಿಂದಿನ ಸಂಚಿಕೆಯಿಂದ)

## ದೃಶ್ಯ ೫

(ಒಳ್ಳೆ ಅನುಕೂಲವಂತರಾಗಿದ್ದ ನರೇಂದ್ರನ ತಂದೆ ಹಠಾತ್ ತೀರಿಕೊಂಡರು. ಸಂಸಾರಕ್ಕೆ ಇದ್ದಕ್ಕಿದ್ದಂತೆ ಬಡತನ ಬಂದಿತು. ಲಕ್ಷಾಧೀಶರಂತೆ ಬಾಳಿದ ಈ ಕುಟುಂಬಕ್ಕೆ ಎರಡು ಹೊತ್ತಿನ ಅನ್ನಕ್ಕೂ ಪರದಾಡುವ ಕಾಲ ಬಂತು. ಕೆಲಸಕ್ಕಾಗಿ ಎಷ್ಟು ಅಲೆದಾಡಿದರೂ ಕೆಲಸ ಸಿಗಲಿಲ್ಲ. ತನ್ನ ಪ್ರೀತಿಯ ತಾಯಿ, ಸೋದರ ಸೋದರಿಯರ ಸಂಕಟವನ್ನು ನೋಡಲಾರದಾದ ನರೇಂದ್ರ ಕಡೆಗೆ ತನ್ನ ಗುರುದೇವರಿಗೆ ಶರಣು ಹೋಗುವುದೇ ಸರಿ ಎಂದು ತೀರ್ಮಾನಿಸಿ, ದಕ್ಷಿಣೇಶ್ವರಕ್ಕೆ ಬಂದ.)

**ನರೇಂದ್ರ:** (ಓಡಿ ಬಂದು ಶ್ರೀರಾಮಕೃಷ್ಣರ ಕಾಲನ್ನು ಹಿಡಿಯುತ್ತಾನೆ.) ಗುರುದೇವಾ, ಗುರುದೇವಾ...

**ರಾಮಕೃಷ್ಣರು:** ಏನು ನರೇನ್, ಇಷ್ಟು ಕಾತರತೆಯಿಂದ ಓಡಿ ಬರುತ್ತಿದ್ದೀಯೆ?

**ನರೇಂದ್ರ:** ಗುರುದೇವಾ, ನೀವೇ ನಮ್ಮ ಮನೆಯ ಬಡತನದ ನಿವಾರಣೆಗೆ ಏನಾದರೂ ಪರಿಹಾರ ಸೂಚಿಸಬೇಕು.

**ರಾಮಕೃಷ್ಣರು:** ಏಕೆ ನರೇನ್, ಏನಾಯಿತು?

**ನರೇಂದ್ರ:** ನಮ್ಮ ತಂದೆ ತೀರಿಕೊಂಡ ಮೇಲೆ ನಮಗೆ ತೀರದ ಬಡತನ ಉಂಟಾಗಿದೆ. ಮನೆಯಲ್ಲಿ ಊಟಕ್ಕೂ ಇಲ್ಲದಂತಹ ಸ್ಥಿತಿ ಬಂದಿದೆ. ಅವರೆಲ್ಲಾ ಹಸಿವಿನಿಂದ ನರಳುವುದನ್ನು ನೋಡಿಕೊಂಡಿರಲು ನನಗೆ ಸಾಧ್ಯವಿಲ್ಲ. ದಯವಿಟ್ಟು ಏನಾದರೂ ಮಾಡಿ.

**ರಾಮಕೃಷ್ಣರು:** ನಾನೇನು ಮಾಡಲಿ, ನರೇನ್?

**ನರೇಂದ್ರ:** ನಿಮ್ಮ ಕಾಳಿ ನೀವು ಕೇಳಿದ್ದಕ್ಕೆ ಇಲ್ಲ ಎನ್ನುವುದಿಲ್ಲ. ಅವಳನ್ನು ನಮ್ಮ ಮನೆಯ ಬಡತನ ನಿವಾರಣೆ ಮಾಡೆಂದು ಕೇಳಿಕೊಳ್ಳಿ.

**ರಾಮಕೃಷ್ಣರು:** ನೋಡು ನರೇನ್, ನನಗೆ ಕಾಳಿಯನ್ನು ಪ್ರಾಪಂಚಿಕ ವಸ್ತುಗಳಿಗಾಗಿ ಬೇಡಿ ಅಭ್ಯಾಸವಿಲ್ಲ. ನಾನು ಆ ರೀತಿ ಬೇಡಲಾರೆ. ಆದರೆ ನೀನೇ ಅವಳನ್ನು ಬೇಡಬಹುದಲ್ಲ?

**ನರೇಂದ್ರ:** ಇಲ್ಲ ಗುರುದೇವ, ನನಗೆ ಅವಳನ್ನು ಹೇಗೆ ಬೇಡಬೇಕೆಂಬುದೇ ತಿಳಿಯದು. ನೀವೇ ನನ್ನ ಪರವಾಗಿ ಬೇಡಿಕೊಳ್ಳಿ.

**ರಾಮಕೃಷ್ಣರು:** ನೋಡು, ನರೇನ್, ನೀನು ಇಷ್ಟು ದಿನ ಅವಳನ್ನು ಉಪೇಕ್ಷೆ ಮಾಡಿದ್ದೀಯೆ. ಅದಕ್ಕೇ ನಿನಗೆ ಈ ರೀತಿ ಕಷ್ಟ ಬಂದಿದೆ. ಕಾಳಿ ನನಗೊಬ್ಬನಿಗೇ ತಾಯಿ ಅಲ್ಲ; ನಿನಗೂ ತಾಯಿ. ಭಕ್ತಿಯಿಂದ ಅವಳನ್ನು ಬೇಡು. ಖಂಡಿತ ಅವಳು ನಿನ್ನ ಬೇಡಿಕೆಯನ್ನು ಈಡೇರಿಸುತ್ತಾಳೆ.

**ನರೇಂದ್ರ:** ಹೌದೇ? (ಅನುಮಾನಿಸುತ್ತಾನೆ.)

**ರಾಮಕೃಷ್ಣರು:** ಹೋಗು, ಹೋಗು, ಬೇಗ ಹೋಗು. ಈ ದಿನ ಮಂಗಳವಾರ. ಒಳ್ಳೆ ದಿನ. ಈ ರಾತ್ರಿ ವೇಳೆ ದೇವಸ್ಥಾನದಲ್ಲಿ ಯಾರೂ ಇರುವುದಿಲ್ಲ. ಹೋಗಿ ಅವಳನ್ನು ಬೇಡಿಕೋ.

**ನರೇಂದ್ರ:** ಸರಿ, ಹೋಗುತ್ತೇನೆ.

(ರಾಮಕೃಷ್ಣರು 'ಎಲ್ಲವೂ ನಿನ್ನಿಚ್ಛೆ' ಎಂಬ ಹಾಡು ಹೇಳುತ್ತಾ ಶತಪಥ ತುಳಿಯುತ್ತಿದ್ದಾರೆ. ನರೇಂದ್ರ ಬರುತ್ತಾನೆ.)

**ರಾಮಕೃಷ್ಣರು:** ಏನು, ನರೇನ್, ಕೇಳಿದೆಯಾ ಕಾಳಿಯನ್ನು?

**ನರೇಂದ್ರ:** ಏನು?

**ರಾಮಕೃಷ್ಣರು:** ಏನು, ನಿನ್ನ ಮನೆಯ ಬಡತನದ ನಿವಾರಣೆಗಾಗಿ ತಾಯಿಯನ್ನು ಬೇಡಲಿಲ್ಲವೇ?

**ನರೇಂದ್ರ:** ಅಯ್ಯೋ, ನನಗೆ ಮರೆತೇ ಹೋಯಿತು.

**ರಾಮಕೃಷ್ಣರು:** ಏಕೆ?

**ನರೇಂದ್ರ:** ಕಾಳೀಮೂರ್ತಿಯನ್ನು ನೋಡುತ್ತಲೇ ಅವಳ ದಿವ್ಯರೂಪದ ಅರಿವಾಯಿತು. ನನ್ನ ಪ್ರಾಪಂಚಿಕ ಕಷ್ಟಗಳೆಲ್ಲಾ ಮರೆತೇ ಹೋಯಿತು. ಜ್ಞಾನ ಕೊಡು, ಭಕ್ತಿ ಕೊಡು, ವೈರಾಗ್ಯ ಕೊಡು ಎಂದು ಬೇಡಿಕೊಂಡೆ.

**ರಾಮಕೃಷ್ಣರು:** ಅಯ್ಯೋ, ಮಂಕೆ. ನೀನು ಹೋದ ಕೆಲಸವನ್ನೇ ಮರೆತೆಯಾ? ಈಗಲಾದರೂ, ಮತ್ತೆ ಹೋಗಿ ಬೇಡಿಕೋ.

**ನರೇಂದ್ರ:** ಆಯಿತು, ಗುರುದೇವ, ಮತ್ತೆ ಹೋಗುತ್ತೇನೆ. (ರಾಮಕೃಷ್ಣರು ಹಾಡುತ್ತ ಓಡಾಡುತ್ತಿದ್ದಾರೆ, ನರೇಂದ್ರ ಬರುತ್ತಾನೆ.)

**ರಾಮಕೃಷ್ಣರು:** ಏನು, ನಿನ್ನ ಮನೆಯ ಬಡತನದ ನಿವಾರಣೆಗಾಗಿ ತಾಯಿಯನ್ನು ಬೇಡಲಿಲ್ಲವೇ?

**ನರೇಂದ್ರ:** ಇಲ್ಲ.

**ರಾಮಕೃಷ್ಣರು:** ಏಕೆ?

**ನರೇಂದ್ರ:** ಕಾಳಿಯನ್ನು ಕಾಣುತ್ತಲೇ ಅವಳ ದಿವ್ಯಸ್ವರೂಪದ ಅರಿವಾಯಿತು. ನನ್ನ ಪ್ರಾಪಂಚಿಕ ಕಷ್ಟಗಳೆಲ್ಲಾ ಮರೆತೇ ಹೋಯಿತು. ಜ್ಞಾನ ಕೊಡು, ಭಕ್ತಿ ಕೊಡು, ವೈರಾಗ್ಯ ಕೊಡು ಎಂದು ಬೇಡಿಕೊಂಡೆ.



**ರಾಮಕೃಷ್ಣರು:** ಅಯ್ಯೋ, ಮಂಕೆ, ನೀನು ಹೋದ ಕೆಲಸವನ್ನೇ ಮರೆತೆ. ಈಗಲಾದರೂ. ಮತ್ತೆ ಹೋಗಿ ಬೇಡಿಕೋ.

**ನರೇಂದ್ರ:** ಆಯಿತು, ಗುರುದೇವ, ಹೋಗುವೆ. (ಮತ್ತೆ ರಾಮಕೃಷ್ಣರು ಹಾಡುತ್ತ ಓಡಾಡುತ್ತಿದ್ದಾರೆ. ನರೇಂದ್ರ ಬರುತ್ತಾನೆ.)

**ರಾಮಕೃಷ್ಣರು:** ಏನು ನರೇನ್, ಕಾಳಿಯನ್ನು ಕೇಳಿದೆ ತಾನೆ?

**ನರೇಂದ್ರ:** ಅಯ್ಯೋ, ಈಗಲೂ ನನಗೆ ಮರೆತೇ ಹೋಯಿತು ಜ್ಞಾನ ಕೊಡು, ವೈರಾಗ್ಯ ಕೊಡು, ಭಕ್ತಿ ಕೊಡು ಎಂದೇ ಬೇಡಿದೆ.

**ರಾಮಕೃಷ್ಣರು:** ಅಯ್ಯೋ ನಿನ್ನ ಮರೆವಿಗೆ ನಾನೇನು ಹೇಳಲಿ? ಈಗಲಾದರೂ ಹೋಗಿ ನಿನ್ನ ಬಡತನ ನಿವಾರಣೆ ಮಾಡು ಎಂದು ಕಾಳಿಯನ್ನು ಬೇಡು, ಹೋಗು.

(ಮತ್ತೆ ನರೇಂದ್ರ ಹೋಗುತ್ತಾನೆ. ಮತ್ತೆ ರಾಮಕೃಷ್ಣರು ತಿರುಗಾಡುತ್ತಿದ್ದಾರೆ. ನರೇಂದ್ರ ಬರುತ್ತಾನೆ.)

**ರಾಮಕೃಷ್ಣರು:** ಬಂದೆಯಾ ನರೇನ್, ಈಗ ಲಾದರೂ ನಿನ್ನ ಬಡತನದ ನಿವಾರಣೆಗಾಗಿ ಬೇಡಿಕೊಂಡೆಯಾ?

**ನರೇಂದ್ರ:** ಇಲ್ಲ, ಗುರುದೇವಾ.

**ರಾಮಕೃಷ್ಣರು:**ಏನು, ಈಗಲೂ ಮರೆತೆಯಾ?

**ನರೇಂದ್ರ:** ಇಲ್ಲ, ಗುರುದೇವಾ, ಈ ಸಲ ಮರೆಯಬಾರದೆಂದು ನಿರ್ಧರಿಸಿ ಜ್ಞಾಪಕ ಇಟ್ಟುಕೊಂಡು ಹೋದೆ. ಆದರೆ ಅಲ್ಲಿ ಕಾಳಿಯ ದರ್ಶನವಾದೊಡನೆಯೆ, ಛೀ, ರಾಜರಾಜೇಶ್ವರಿ ಯನ್ನು ಕೇವಲ ಪ್ರಾಪಂಚಿಕ ವಿಷಯಗಳಿಗಾಗಿ ಬೇಡುವುದೇ? ಚಕ್ರವರ್ತಿಯ ಮುಂದೆ ನಿಂತು ಬದನೇಕಾಯಿ ಬೇಡಿದಂತಾಗುತ್ತದೆ ಎನ್ನಿಸಿತು. ಆದ್ದರಿಂದ ಈ ಸಲವೂ ನಾನು, "ಜ್ಞಾನ ಕೊಡು, ಭಕ್ತಿ ಕೊಡು, ವೈರಾಗ್ಯ ಕೊಡು" ಎಂದು ಬೇಡಿ ಬಂದುಬಿಟ್ಟೆ.

**ರಾಮಕೃಷ್ಣರು:** ಸರಿ ಬಿಡು. ನಿನ್ನ ಹಣೆಯಲ್ಲಿ ಬಡತನದಲ್ಲಿ ಬಳಲುವುದೇ ಬರೆದಿದ್ದರೆ ನಾನೇನು ಮಾಡಲಿ?

**ನರೇಂದ್ರ:** ಹಾಗೆನ್ನಬೇಡಿ ಗುರುದೇವ, ನನ್ನ ಮನೆಯವರು ಹೊಟ್ಟೆಗಿಲ್ಲದೆ ಸಂಕಟ ಪಡುವುದನ್ನು ನೋಡಲು ನನ್ನಿಂದಾಗದು. ದಯವಿಟ್ಟು ನೀವೇ ಏನಾದರೂ ಪರಿಹಾರ ಮಾಡಿ. ನನಗೆ ಗೊತ್ತು, ಇದೆಲ್ಲಾ ನಿಮ್ಮದೇ ಆಟ. ನಾನು ನಿಮ್ಮ ತಾಯಿಯನ್ನು ಒಪ್ಪುತ್ತಿಲ್ಲ ಎಂದು ನನಗೆ ಬುದ್ಧಿ ಕಲಿಸಲು ನೀವು ಈ ರೀತಿ ಆಟ ಹೂಡಿದ್ದೀರಿ. ಈಗ ನೀವೇ ಏನಾದರೂ ಮಾಡಬೇಕು. (ನರೇಂದ್ರ ಶ್ರೀರಾಮಕೃಷ್ಣರ ಕಾಲು ಹಿಡಿಯುವನು.)

**ರಾಮಕೃಷ್ಣರು:** ಸರಿ, ಏಳು, ನಿನ್ನ ಮನೆಯವರಿಗೆ ಊಟಬಟ್ಟೆಗಳಿಗೆ ಏನೂ ಕೊರತೆಯಾಗದಂತೆ ಆಗಲಿ. (ಅಂತೆಯೇ ಮುಂದೆ ನರೇಂದ್ರನಿಗೆ ಒಂದು ಕೆಲಸ ಸಿಕ್ಕಿ ಕುಟುಂಬಕ್ಕೆ ಅನುಕೂಲ ವಾಯಿತು.)

## ದೃಶ್ಯ ೬

(ನರೇಂದ್ರ, ರಾಮಕೃಷ್ಣರು ಕುಳಿತಿದ್ದಾರೆ. ರಾಮಕೃಷ್ಣರು ನರೇಂದ್ರನನ್ನೇ ಎವೆ ಇಕ್ಕದೆ ನೋಡುತ್ತಿದ್ದಾರೆ. ಅವರಿಂದ ಹೊರಟ ವಿದ್ಯುತ್ ಪ್ರವಾಹದಂತಹ ಶಕ್ತಿಯೊಂದು ನರೇಂದ್ರನನ್ನು ಪ್ರವೇಶಿಸುತ್ತಿರುವಂತೆ ನರೇಂದ್ರನಿಗೆ ಅರಿವಾಗು ತ್ತಿದೆ. ಅವನು ಪ್ರಜ್ಞಾಶೂನ್ಯನಾಗಿಬಿಟ್ಟ. ಇಬ್ಬರೂ ಕಣ್ಣುಮುಚ್ಚಿ ಸ್ವಲ್ಪ ಹೊತ್ತು ಕುಳಿತಿದ್ದಾರೆ. ನರೇಂದ್ರ ಕಣ್ಣುಬಿಡುತ್ತಾನೆ. ರಾಮಕೃಷ್ಣರ ಕಣ್ಣಿನಲ್ಲಿ ನೀರು.)

**ನರೇಂದ್ರ:** ಗುರುದೇವ, ಇದೇಕೆ ತಮ್ಮ ಕಣ್ಣಿನಲ್ಲಿ ನೀರು?

**ರಾಮಕೃಷ್ಣರು:** ನರೇನ್, ಇಂದು ನಾನು, ಇಲ್ಲಿದ್ದ (ತಮ್ಮನ್ನು ತೋರಿಸಿಕೊಂಡು) ಸರ್ವಸ್ವವನ್ನೂ ನಿನಗೆ ಕೊಟ್ಟುಬಿಟ್ಟೆ. ಈಗ ನಾನೊಬ್ಬ ಬಡ ಫಕೀರ. ಇರಲಿ, ಈಗ ನಾನು ನಿನ್ನೊಳಗೆ ಹರಿಸಿರುವ ಶಕ್ತಿಯಿಂದ ಮುಂದೆ ನಿನ್ನ ಮೂಲಕ ಅನೇಕ ಜಗತ್ಕಲ್ಯಾಣ ಕಾರ್ಯಗಳು ಜರುಗಲಿವೆ.

**ನರೇಂದ್ರ :** ತಮ್ಮ ಇಚ್ಛೆ ಇದ್ದಂತಾಗಲಿ, ಗುರುದೇವ.

## ದೃಶ್ಯ ೭

(ಅಗಸ್ಟ್ ೧೬, ೧೮೮೬ ರಂದು ರಾಮಕೃಷ್ಣರು ಮಹಾಸಮಾಧಿಯನ್ನು ಹೊಂದಿದರು. ಅದಕ್ಕೆ ೩ ದಿನ ಮುಂಚೆ, ಅವರು ಅತ್ಯಂತ ನಿತ್ರಾಣರಾಗಿ ಮಲಗಿದ್ದಾರೆ. ನರೇಂದ್ರ ಮತ್ತು ಇತರ ಭಕ್ತರು ಸುತ್ತ ನೆರೆದಿದ್ದಾರೆ. ಆದರೆ ನರೇಂದ್ರನ ಮನಸ್ಸಿನಲ್ಲಿ ಈಗಲೂ ಒಂದು ಆಲೋಚನೆ ಬಂದಿದೆ.)

**ನರೇಂದ್ರ (ಸ್ವಗತ) :** ಇವರು ನಿಜಕ್ಕೂ ಅವತಾರಪುರುಷರೇ? ತಾವು ಅವತಾರ ಎಂದು ಇವರೇ ಎಷ್ಟೋ ಬಾರಿ ಸಾರಿದ್ದಾರೆ. ಆದರೂ, ನನಗಿನ್ನೂ ಪೂರ್ತಿ ಒಪ್ಪಿಗೆ ಆಗಿಲ್ಲ. ಆದರೆ ಈಗ ತಮ್ಮ ಶರೀರ ಯಾವ ಕ್ಷಣ ದಲ್ಲಾದರೂ ಬಿದ್ದು ಹೋಗಬಹುದು ಎನ್ನುವ ಈ ಅವಸ್ಥೆಯಲ್ಲಿ ಇವರು ಹೇಳಲಿ, "ನಾನು ಸ್ವಯಂ ಭಗವಂತನ ಅವತಾರವೇ" ಅಂತ. ಆಗ ನಾನದನ್ನು ನಂಬುತ್ತೇನೆ.

**ರಾಮಕೃಷ್ಣರು :** ನರೇನ್, ನಿನಗಿನ್ನೂ ನಂಬಿಕೆ ಯಾಗಲಿಲ್ಲವೆ? ಹಿಂದೆ ತ್ರೇತಾಯುಗದಲ್ಲಿ ಯಾರು ರಾಮನಾಗಿದ್ದನೋ, ದ್ವಾಪರ ಯುಗದಲ್ಲಿ ಯಾರು ಕೃಷ್ಣನಾಗಿದ್ದನೋ ಅವನೇ, ಈ ಕಲಿಯುಗದಲ್ಲಿ, ಈ ಶರೀರದಲ್ಲಿ ರಾಮಕೃಷ್ಣನಾಗಿ ಅವತರಿಸಿದ್ದಾನೆ.

(ನರೇಂದ್ರ ಬೆಚ್ಚಿಬೀಳುವನು. ನರೇಂದ್ರ ಓಡಿ ಹೋಗಿ ಅವರ ಪಾದದ ಮೇಲೆ ಬಿದ್ದು "ಕ್ಷಮಿಸಿ, ಗುರುದೇವಾ, ನನ್ನನ್ನು ಕ್ಷಮಿಸಿ" ಎನ್ನುವನು. ರಾಮಕೃಷ್ಣರು ಅವನ ತಲೆಯ ಮೇಲೆ ಕೈ ಆಡಿಸುವರು.)

## ದೃಶ್ಯ ೮

(ಇಡೀ ಭರತಖಂಡವನ್ನು ಸುತ್ತುತ್ತಾ ಹೊರಟ ಸ್ವಾಮಿ ವಿವೇಕಾನಂದರು ರಾಜಸ್ಥಾನದ ಆಳ್ವಾರಿಗೆ ಬಂದರು. ಅಲ್ಲಿಯ ರಾಜ ಆಂಗ್ಲರ ಸಂಸ್ಕೃತಿಯ ಬಲೆಗೆ ಸಿಕ್ಕಿ ಬಿದ್ದಿದ್ದ.)

**ರಾಜ :** ಸ್ವಾಮೀಜಿ! ತಾವು ದೊಡ್ಡ ಪಂಡಿತರು. ಬೇಕಾದಷ್ಟು ಧನಾರ್ಜನೆ ಮಾಡುವ ಶಕ್ತಿಯಿದೆ. ಆದರೂ ಫಕೀರರಂತೆ ಅಲೆಯುವುದೇಕೆ?

**ವಿವೇಕಾನಂದರು:** ಮಹಾರಾಜ, ನೀನು ರಾಜನ ಕರ್ತವ್ಯಗಳನ್ನು ತ್ಯಜಿಸಿ, ಫರಂಗಿ ಯವರೊಡನೆ ಸೇರಿ ಯಾವಾಗಲೂ ಬೇಟೆ ಯಲ್ಲಿ ಕಾಲ ಕಳೆಯುವುದೇಕೆ?

**ದಿವಾನರು :** ಆಹಾ! ಎಷ್ಟು ಧೈರ್ಯ ಈ ಸಂನ್ಯಾಸಿಗೆ!

**ರಾಜ :** (ಚಿಂತಿಸಿ) ಸ್ವಾಮೀಜಿ. ನಾನು ಏತಕ್ಕೆ ಹಾಗೆ ಮಾಡುವುವೆನೋ ನನಗೇ ತಿಳಿಯದು. ಆದರೂ ಆ ರೀತಿ ಮಾಡುವುದರಲ್ಲಿ ನನಗೆ ಆನಂದ ಸಿಗುತ್ತದೆ.

**ವಿವೇಕಾನಂದರು :** ನೋಡಪ್ಪ, ನನಗೂ ಸಹ ನನ್ನ ಫಕೀರತನದಲ್ಲಿ ಆನಂದ ಸಿಗುತ್ತದೆ.

**ರಾಜ:** ಬಾಬಾಜಿ, ನನಗೆ ಮೂರ್ತಿಪೂಜೆಯಲ್ಲಿ ನಂಬಿಕೆ ಇಲ್ಲ. ಕಲ್ಲು, ಮರ, ಲೋಹಗಳನ್ನು ನಾನು ಪೂಜಿಸಲಾರೆ.

**ವಿವೇಕಾನಂದರು :** ಅದಾರ ಚಿತ್ರ?

**ದಿವಾನರು :** ಮಹಾರಾಜರದು.

**ವಿವೇಕಾನಂದರು :** ಎಲ್ಲಿ, ಅದನ್ನು ಇಲ್ಲಿ ಕೊಡಿ. ದಿವಾನರೆ, ಇದರ ಮೇಲೆ ಉಗುಳಿ.

**ದಿವಾನರು :** ಅಯ್ಯಯ್ಯೋ! ಶಾಂತಂ ಪಾಪಂ. ಬಾಬಾಜಿ, ಏನು ನೀವು ಹೇಳುವುದು? ಇದು ನಮ್ಮ ರಾಜರ ಚಿತ್ರ. ಇದರ ಮೇಲೆ ಉಗುಳುವುದೇ?

**ವಿವೇಕಾನಂದರು:** ಅದರಲ್ಲೇನು? ನಿಮ್ಮ ಮಹಾರಾಜರೇನೂ ಇದರಲ್ಲಿ ಕುಳಿತಿಲ್ಲವಲ್ಲ. ಇದರಲ್ಲಿ ಅವರ ಶರೀರವಿಲ್ಲ, ರಕ್ತವಿಲ್ಲ, ಮಾಂಸವಿಲ್ಲ. ಇದು ಬರಿಯ ಚಿತ್ರ.

**ದಿವಾನರು :** ದಯವಿಟ್ಟು ಆ ರೀತಿ ಹೇಳಬೇಡಿ. ಅದರಲ್ಲಿ ಸ್ವತಃ ನಮ್ಮ ಮಹಾರಾಜರಿಲ್ಲದಿದ್ದರೂ,

ನಮಗೆ ಈ ಚಿತ್ರ ಅವರಷ್ಟೇ ಗೌರವಾರ್ಹ. ಆದ್ದರಿಂದ ನಾವು ಅದಕ್ಕೆ ಅವಮಾನ ಮಾಡಲಾರೆವು. ಕ್ಷಮಿಸಿ.

**ವಿವೇಕಾನಂದರು:** ನೋಡಿದೆಯಾ, ಮಹಾರಾಜ. ಒಂದು ರೀತಿಯಲ್ಲಿ ನೋಡಿದರೆ ಈ ಚಿತ್ರ ನೀನಲ್ಲ. ಇನ್ನೊಂದು ರೀತಿಯಲ್ಲಿ ನೋಡಿದರೆ ನೀನೇ ಅದರಲ್ಲಿ ಇದ್ದೀಯೆ. ಆದ್ದರಿಂದಲೇ ನಿನ್ನ ಅಧಿಕಾರಿಗಳು, ನಿನ್ನ ಚಿತ್ರಕ್ಕೆ, ನಿನಗೆ ಕೊಟ್ಟಷ್ಟೇ ಮರ್ಯಾದೆ ಕೊಡುತ್ತಾರೆ. ಹಾಗೆಯೇ ಭಕ್ತರಿಗೆ ವಿಗ್ರಹವನ್ನು ಕಂಡಾಗ ಪರಮಾತ್ಮನ ನೆನಪಾಗುತ್ತದೆ. ಅವರು ವಿಗ್ರಹವು ಯಾವುದನ್ನು ಸೂಚಿಸುತ್ತದೆಯೋ, ಆ ದೇವರನ್ನು ಪೂಜಿಸುವರೇ ಹೊರತು ವಿಗ್ರಹವನ್ನೇ ಪೂಜಿಸುವುದಿಲ್ಲ.

**ರಾಜ :** ಸ್ವಾಮೀಜಿ, ತಮ್ಮ ಕೃಪೆಯಿಂದ ಮೂರ್ತಿಪೂಜೆಯ ರಹಸ್ಯ ನನಗಿಂದು ತಿಳಿಯಿತು. ನಿಮ್ಮಿಂದ ನನ್ನ ಕಣ್ಣು ತೆರೆಯಿತು. (ನಮಸ್ಕರಿಸುವನು.)

## ದೃಶ್ಯ ೯

(ಅಮೇರಿಕದ ಚಿಕಾಗೋ ನಗರದಲ್ಲಿ ನಡೆಯಲಿದ್ದ ಸರ್ವಧರ್ಮ ಸಮ್ಮೇಳನಕ್ಕೆ ಸ್ವಾಮಿ ವಿವೇಕಾನಂದರು, ಹಿಂದೂಧರ್ಮದ ಪ್ರತಿನಿಧಿಯಾಗಿ ಹೋಗಬೇಕೆಂದು, ಚೆನ್ನೈ ನಗರದಲ್ಲಿದ್ದ ಅವರ ಸ್ನೇಹಿತರು, ಅನುಯಾಯಿಗಳು ಸ್ವಾಮೀಜಿಯವರನ್ನು ಒತ್ತಾಯ ಮಾಡಿ, ಧನಸಂಗ್ರಹ ಮಾಡಿ ಕಳುಹಿಸಿಕೊಟ್ಟರು. ಸೆಪ್ಟೆಂಬರ್ ೧೧, ೧೮೯೩, ಸೋಮವಾರ, ಪೂರ್ವ ಮತ್ತು ಪಶ್ಚಿಮ ದೇಶಗಳಿಂದ ಬಂದಿದ್ದ, ವಿಭಿನ್ನ ಮತ ಸಂಪ್ರದಾಯಗಳ ಪ್ರತಿನಿಧಿಗಳು ಚಿಕಾಗೋ ನಗರದ ಆರ್ಟ್ ಗ್ಯಾಲರಿಯಲ್ಲಿ ಸೇರಿದ್ದರು. ಅವರ ಹೆಸರನ್ನು ಕರೆದಾಗ, ಸ್ವಾಮೀಜಿಯವರು ಎದ್ದು ನಿಂತರು.)

**ಸ್ವಾಮೀಜಿ :** ಅಮೆರಿಕದ ಸಹೋದರಿಯರೆ ಮತ್ತು ಸಹೋದರರೆ, (ಜೋರಾಗಿ ಚಪ್ಪಾಳೆ ಹೊಡೆಯುವ ಶಬ್ದ.)

ನಮಗೆ ನೀವು ನೀಡಿರುವ ಆತ್ಮೀಯವಾದ ಸ್ವಾಗತಕ್ಕೆ ವಂದನೆಗಳನ್ನು ಸಲ್ಲಿಸಲು ಪ್ರಯತ್ನಿಸಿರುವ ಈ ಸಮಯದಲ್ಲಿ ನನ್ನ ಹೃದಯ ಅವರ್ಣನೀಯ ಆನಂದದಿಂದ ತುಂಬಿ ತುಳುಕಾಡುತ್ತಿದೆ.... ಧಾರ್ಮಿಕ ಸಹನೆಯನ್ನು, ಎಲ್ಲ ಧರ್ಮಗಳೂ ಸ್ವೀಕಾರಯೋಗ್ಯ ಎಂಬುದನ್ನೂ ಜಗತ್ತಿಗೆ ಬೋಧಿಸಿದ ಧರ್ಮಕ್ಕೆ ಸೇರಿದವನು ನಾನು ಎಂಬ ಹೆಮ್ಮೆ ನನ್ನದು. ಪರಧರ್ಮ ಸಹಿಷ್ಣುತೆಯಲ್ಲಿ ನಮಗೆ ನಂಬಿಕೆಯುಂಟು;



ಅಷ್ಟೇ ಅಲ್ಲ, ಎಲ್ಲ ಧರ್ಮಗಳೂ ಸತ್ಯ ಎಂಬುದನ್ನೂ ನಾವು ಒಪ್ಪುತ್ತೇವೆ. ...ಇಂದಿಗೂ ಕೋಟ್ಯಂತರ ಜನರು ಪಠಿಸುತ್ತಿರುವ ಶ್ಲೋಕವೊಂದರ ಕೆಲವು ಪಂಕ್ತಿಗಳನ್ನು ನಿಮ್ಮ ಮುಂದೆ ಹೇಳುತ್ತೇನೆ: “ಬೇರೆ ಬೇರೆ ಕಡೆಗಳಲ್ಲಿ ಹುಟ್ಟಿದ ನದಿಗಳು ಕೊನೆಗೆ ಸಾಗರದಲ್ಲಿ ಸಂಗಮಗೊಳ್ಳುವಂತೆ, ಹೇ ಭಗವನ್, ಮಾನವರು ತಮ್ಮ ತಮ್ಮ ಸಂಸ್ಕಾರಗಳಿಗೆ ತಕ್ಕಂತೆ, ನೇರವಾಗಿಯೋ, ಡೊಂಕಾಗಿಯೋ ಇರುವ ದಾರಿಗಳನ್ನು ಅನುಸರಿಸುತ್ತಾರೆ. ಅವೆಲ್ಲವೂ ನಿನ್ನೆಡೆಗೆ ಕರೆದೊಯ್ಯುತ್ತವೆ..” ಇಂದು ಬೆಳಗ್ಗೆ ಈ ಸಭೆಯ ಶುಭಾರಂಭವನ್ನು ಸೂಚಿಸಲು ಮೊಳಗಿದ ಘಂಟಾನಾದ ಎಲ್ಲ ಮತಾಂಧತೆಯ, ಖಡ್ಗ ಅಥವಾ ಲೇಖನಿಯಿಂದ ಸಾಧಿಸಿದ ಮತೀಯ ಹಿಂಸೆಗಳ, ಎಲ್ಲ ಮನಸ್ತಾಪದ ಅಂತ್ಯವನ್ನು ಸೂಚಿಸುವ ಘಂಟಾನಾದವೂ ಆಗಲಿ ಎಂಬುದೇ ನನ್ನ ಆಶಯ.

## ದೃಶ್ಯ ೧೦

(ಅಂದಿನಿಂದಲೇ ಸ್ವಾಮಿ ವಿವೇಕಾನಂದರು ವಿಶ್ವವಿಖ್ಯಾತರಾದರು. ಇತ್ತ ಭಾರತದಲ್ಲಿ ಆ ವೀರಪುತ್ರನ ಚೈತ್ರಯಾತ್ರೆಯನ್ನು ವೈಭವವಾಗಿ ಆಚರಿಸಲಾಯಿತು. ಸ್ವಾಮಿ ವಿವೇಕಾನಂದರು ಯುಗಧರ್ಮಪ್ರಚಾರಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿ ೧೮೯೭, ಮೇ ತಿಂಗಳ ೧ ನೇ ತಾರೀಖು ಒಂದು ಸಭೆಯನ್ನು ಕರೆದರು. ಅಲ್ಲಿ ಶ್ರೀರಾಮಕೃಷ್ಣರ ಗೃಹಸ್ಥಶಿಷ್ಯರೂ, ಸಂನ್ಯಾಸಿಶಿಷ್ಯರೂ ಸೇರಿದ್ದಾರೆ.)

**ಸ್ವಾಮಿ ವಿವೇಕಾನಂದರು :** ನಾವು ಯಾರ ಹೆಸರಿನಲ್ಲಿ ಸಂನ್ಯಾಸ ಸ್ವೀಕಾರ ಮಾಡಿರುವೆವೋ, ಆತನ ಹೆಸರಿನಲ್ಲಿಯೇ ಸಂಘ ಸ್ಥಾಪನೆಯಾಗಬೇಕು. ಯಾರ ಜೀವನ ಆದರ್ಶವು ದೇಹಾವಸಾನದ ನಂತರ ಇಪ್ಪತ್ತೇ ವರ್ಷಗಳಲ್ಲಿ, ಪೂರ್ವ ಪಶ್ಚಿಮಗಳಲ್ಲಿ ಹಬ್ಬಿದೆಯೋ ಆ ಪ್ರಭುವಿನ ದಾಸರು ನಾವು. ಶ್ರೀರಾಮಕೃಷ್ಣರು ಬೋಧಿಸಿರುವ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಬೋಧಿಸಿ, ಜನರ ದೈಹಿಕ, ಮಾನಸಿಕ, ಪಾರಮಾರ್ಥಿಕ ಉನ್ನತಿಗೆ ಸಹಾಯ ಮಾಡುವುದು ಸಂಘದ ಉದ್ದೇಶ. ಇದಕ್ಕೆಲ್ಲಾ ನಿಮ್ಮ ಅನುಮತಿ ಇದೆ ಎಂದು ಭಾವಿಸಿದ್ದೇನೆ. **'ಆತ್ಮನೋ ಮೋಕ್ಷಾರ್ಥಂ, ಜಗದ್ಧಿತಾಯ ಚ'**– ನಾವೆಲ್ಲರೂ ಆಧ್ಯಾತ್ಮಿಕವಾಗಿ ಮುಂದುವರೆಯೋಣ. ಇತರರ ಹಿತವನ್ನೂ ಸಾಧಿಸೋಣ. ಇದೇ ನಮ್ಮ ರಾಮಕೃಷ್ಣ ಸಂಘದ ಆದರ್ಶವಾಗಿರಲಿ.

**ಎಲ್ಲರೂ :** ಇದಕ್ಕೆ ನಾವೆಲ್ಲರೂ ಆನಂದದಿಂದ ಅನುಮೋದಿಸುತ್ತೇವೆ. (ಹೀಗೆ ರಾಮಕೃಷ್ಣ ಮಿಷನ್ ಸ್ಥಾಪನೆಯಾಯಿತು.)


## ಮಕ್ಕಳ ಕಥಾಸ್ಪರ್ಧೆ

ಮಕ್ಕಳೇ, ನಿಮ್ಮ ಬೇಸಿಗೆ ರಜಾದಿನಗಳಲ್ಲಿ ಏನು ಮಾಡುವಿರಿ? ಒಂದು ಒಳ್ಳೆಯ ಕತೆಯನ್ನು ಬರೆದು ನಮಗೆ ಕಳುಹಿಸಿ, ಆಕರ್ಷಕ ಬಹುಮಾನಗಳನ್ನು ಪಡೆದುಕೊಳ್ಳಿ. ಇದಕ್ಕಾಗಿ ನೀವು 12–15 ವರ್ಷ ವಯಸ್ಸಿನವರಾಗಿರಬೇಕು. ಕತೆಯನ್ನು ನಿಮ್ಮ ಸ್ವಂತ ಭಾಷೆಯಲ್ಲಿ 2 ಫುಲ್‌ಸ್ಕೇಪ್ ಪುಟದೊಳಗೆ ಬರೆಯಿರಿ. ಪುಸ್ತಕದಿಂದ ಅಥವಾ ಪತ್ರಿಕೆಯಿಂದ ನಕಲು ಮಾಡಿರಬಾರದು. ವಯಸ್ಸಿನ ದೃಢೀಕರಣಕ್ಕಾಗಿ ನಿಮ್ಮ ಶಾಲಾ ಮಾರ್ಕ್ಸ್‌ಕಾರ್ಡಿನ ಪ್ರತಿಯನ್ನು ಲಗತ್ತಿಸಿ. ಉತ್ತಮ ಕತೆಗಳನ್ನು ವಿವೇಕಪ್ರಭದ 'ಕಥೋಪದೇಶ' ಅಂಕಣದಲ್ಲಿ ಪ್ರಕಟಿಸಲಾಗುವುದು.

**ಮೊದಲನೆಯ ಬಹುಮಾನ – ರೂ.750**
**ಎರಡನೆಯ ಬಹುಮಾನ – ರೂ.500**
**ಮೂರನೆಯ ಬಹುಮಾನ – ರೂ.250**
**10 ಸಮಾಧಾನಕರ ಬಹುಮಾನಗಳು**
**– ಒಂದು ವರ್ಷ ವಿವೇಕಪ್ರಭದ ಚಂದಾ**

**ನಿಮ್ಮ ಕತೆಗಳು ನಮಗೆ ಸೇರಬೇಕಾದ ಕಡೆಯ ದಿನಾಂಕ : 15.6.2009**